ಅ) ನಿಯಮಗಳ ಪ್ರಕಾರ ಉದ್ಯೋಗಾವಕಾಶ ಕಳಿಸಲು ಸದ್ಯಕ್ಕೆ ಅವಕಾಶವಿಲ್ಲ. ಮುಳುಗಡೆಯಾದ ಗ್ರಾಮಗಳ ನಿವಾಸಿಗಳಿಗೆ ಪುನರ್ವಸತಿ ಕಾರ್ಯ ಕೈಗೊಳ್ಳಲಾಗಿದೆ.

ಹಾಸನ ಜಿಲ್ಲೆಗೆ ಬರಪರಿಹಾರ ಧನದ ಬಗ್ಗೆ.

1276 - ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1990-91ನೇ ಸಾಲಿನಲ್ಲಿ ಬರಪರಿಹಾರಕ್ಕಾಗಿ ಹಾಸನ ಜಿಲ್ಲೆಗೆ ಮಂಜೂರಾದ ಹಣವೆಷ್ಟು?

ಆ) ಯಾವ ಯಾವ ಕ್ಷೇತ್ರಕ್ಕೆ ಯಾವ ಯಾವ ಕೆಲಸಕ್ಕಾಗಿ ಎಷ್ಟು ಹಣ ಮಂಜೂರು ಮಾಡಲಾಯಿತು?

ಇ) ಪ್ರತಿ ವಿಧಾನಸಭಾ ಕ್ಷೇತ್ರಗಳಲ್ಲಿ ಎಷ್ಟು ಹಳ್ಳಿಗಳು ಅಭಾವ ಪೀಡಿತ ಪ್ರದೇಶಗಳೆಂದು ಘೋಷಿಸಲಾಗಿತ್ತು?

ಈ) ಅವುಗಳಲ್ಲಿ ಕುಡಿಯುವ ನೀರಿಗಾಗಿ ಬೇಡಿಕೆಯಿದ್ದ ಹಳ್ಳಿಗಳ ಸಂಖ್ಯೆ ಎಷ್ಟು?

ಉ) ಕುಡಿಯುವ ನೀರಿಗಾಗಿ ಪ್ರತಿ ಕ್ಷೇತ್ರಕ್ಕೆ ಮಂಜೂರಾದ ಹಣವೆಷ್ಟು?

ಊ) ಜನರಿಗೆ ಕೆಲಸ ಒದಗಿಸಲು ಪ್ರತಿ ಕ್ಷೇತ್ರಕ್ಕೆ ಮಂಜೂರಾದ ಹಣವೆಷ್ಟು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ರೂ. 2,06,982.

ಆ) ಅನುಬಂಧ 'ಅ' ನಲ್ಲಿ ನೀಡಿದೆ.

ಇ) ಐದು ತಾಲ್ಲೂಕಿನ ಒಟ್ಟು 842 ಹಳ್ಳಿಗಳನ್ನು ಅಭಾವಕ್ಕೊಳಗಾದ ಗ್ರಾಮಗಳೆಂದು ಗುರುತಿಸಲಾಗಿದೆ.

ಈ) 196 ಹಳ್ಳಿಗಳು.

ಉ) ಕುಡಿಯುವ ನೀರಿನ ಪೂರೈಕೆಗಾಗಿ ತಾಲ್ಲೂಕುವಾರು ಹಣ ಬಿಡುಗಡೆ ಮಾಡಲಾಗುವುದು. ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

1. ಅರಸೀಕೆರೆ	ರೂ. 15.61
2. ಚನ್ನರಾಯಪಟ್ಟಣ	ರೂ. 2.39
3. ಸಕಲೇಶಪುರ	ರೂ. 0.50
4. ಬೇಲೂರು	ರೂ. 3.36
5. ಹಾಸನ	ರೂ. 53.93

ಊ) 1. ಹಾಸನ ಕ್ಷೇತ್ರಕ್ಕೆ

1. ಹಾಸನ ಕ್ಷೇತ್ರಕ್ಕೆ	ರೂ. 9,90,640-60
2. ಗಂಡಸಿ ಕ್ಷೇತ್ರಕ್ಕೆ	ರೂ. 22,52,087-00
3. ಅರಕಲಗೂಡು	ರೂ. 6,25,000-00
4. ಅರಸೀಕೆರೆ ಕ್ಷೇತ್ರಕ್ಕೆ	ರೂ. 16,14,713-00
5. ಹೊಳೆನರಸೀಪುರ	ರೂ. 11.30,040-00
6. ಚನ್ನರಾಯಪಟ್ಟಣ	ರೂ. 11,59,866-00
7. ಬೇಲೂರು	ರೂ. 5,88,252-00

ಅನುಬಂಧ - ಅ

ಕ್ಷೇತ್ರವಾರು ಬಿಡುಗಡೆ ಮಾಡಿರುವ ಹಣ:

		(ರೂ. ಲಕ್ಷಗಳಲ್ಲಿ)
1.	**ಕುಡಿಯುವ ನೀರಿನ ಪೂರೈಕೆಗಾಗಿ:**	
	ಟಿ.ಎಂ.ಸಿ. ಅರಸೀಕರೆ	4.50
	ಟಿ.ಎಂ.ಸಿ. ಸಿ. ಆರ್. ಪಟ್ಟಣ	1.50
	ಟಿ.ಎಂ.ಸಿ. ಸಕಲೇಶಪುರ	0.50
	ಟಿ.ಎಂ.ಸಿ. ಬೇಲೂರು	0.05
2.	**ಜಿಲ್ಲಾಪರಿಷತ್ ಹಾಸನ**	
	ಹಾಸನ	4.83
	ಅರಸೀಕೆರೆ	0.41
	ಚನ್ನರಾಯಪಟ್ಟಣ	0.89
	ಬೇಲೂರು	1.16
	ಜಿಲ್ಲಾ ಪರಿಷತ್, ಹಾಸನ	4.00
	ಅರಸೀಕೆರೆ	10.70
	ಜಿಲ್ಲಾ ಪರಿಷತ್, ಹಾಸನ	34.00
	ಹಾಸನ	10.00
	ಸಿ.ಎಂ.ಸಿ ಹಾಸನ	5.00
	ಬೇಲೂರು	1.70
3.	**ಉದ್ಯೋಗ ಸೃಜನೆಗೆ**	
	ಜಿಲ್ಲಾ ಪರಿಷತ್ ಹಾಸನ	
	ಹಾಸನ	4.00
	ಬೇಲೂರು	4.00
	ಚನ್ನರಾಯಪಟ್ಟಣ	7.00
	ಅರಸೀಕೆರೆ	10.00
	ಅರಕಲಗೂಡು	4.00
	ಚನ್ನರಾಯಪಟ್ಟಣ	6.00
	ಹೊಳೆನರಸೀಪುರ	4.00
	ಅರಸೀಕೆರೆ	4.00
	ಅರಕಲಗೂಡು	1.00
	ಹಾಸನ	4.95
	ಅರಕಲಗೂಡು	1.25
	ಅರಸೀಕೆರೆ	1.00
	ಚನ್ನರಾಯಪಟ್ಟಣ	0.90
	ಅರಸೀಕೆರೆ	1.50

4.	**ಪ್ರಾಜೆಕ್ಟ್ ಡೈರೆಕ್ಟರ್ ಡಿಎಲ್‌ಡಿಬಿಹೆಚ್ (ಸೆಕ್ಷನ್)**	
	ಹಾಸನ	11.46
	ಅರಸೀಕೆರೆ	3.99
	ತಹಶೀಲ್ದಾರ್, ಹಾಸನ, ಗ್ರಾಮಲೆಕ್ಕಿಗರ ವಸತಿ ಗೃಹಕ್ಕೆ	3.06
5.	**ತೋಟಗಾರಿಕೆ ಇಲಾಖೆಗೆ:**	
	ಹಾಸನ	1.56
	ಚನ್ನರಾಯಪಟ್ಟಣ	1.53
	ಬೇಲೂರು	0.77
	ಹೊಳೆನರಸೀಪುರ	0.30
6.	**ಜಿಲ್ಲಾ ಯುವ ಸೇವೆಗಳು ಹಾಸನ:**	1.15
7.	**ಉಪನಿರ್ದೇಶಕರು, ಕೃಷಿಇಲಾಖೆ:**	
	ಚನ್ನರಾಯಪಟ್ಟಣ	3.10
	ಬೇಲೂರು	1.11
	ಹಾಸನ	1.88

ಬೇಲೂರು ತಾಲ್ಲೂಕಿನಲ್ಲಿ ಅಭಾವ ಪೀಡಿತ ಹಳ್ಳಿಗಳ ಸಂಖ್ಯೆ

1277 - ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೇಲೂರು ತಾಲ್ಲೂಕಿನಲ್ಲಿ ಅಭಾವ ಪ್ರದೇಶವೆಂದು ಘೋಷಿಸಲ್ಪಟ್ಟ ಹಳ್ಳಿಗಳೆಷ್ಟು, ಅದನ್ನು ಯಾವಾಗ ಘೋಷಿಸಲಾಯಿತು?

ಆ) ಅಭಾವ ಪರಿಹಾರಕ್ಕಾಗಿ ಬಿಡುಗಡೆಯಾದ ಹಣವೆಷ್ಟು?

ಇ) ಯಾವ ಯಾವ ಕೆಲಸಕ್ಕಾಗಿ ಹಣ ಬಿಡುಗಡೆಯಾಯಿತು ಹಾಗೂ ಖರ್ಚಾದ ಹಣವೆಷ್ಟು?

ಈ) ಬೇಲೂರು ತಾಲ್ಲೂಕು ಪಂಚಾಯತಿ ಸಮಿತಿ ಹಾಗೂ ತಹಶೀಲ್ದಾರರು ಮತ್ತಷ್ಟು ಹಳ್ಳಿಗಳನ್ನು ಅಭಾವ ಪ್ರದೇಶಗಳೆಂದು ಘೋಷಿಸಲು ಯಾವಾಗ ಶಿಫಾರಸ್ಸು ಮಾಡಿದ್ದರು?

ಉ) ಆ ಹಳ್ಳಿಗಳನ್ನು ಅಭಾವ ಪ್ರದೇಶಗಳೆಂದು ಘೋಷಿಸಲಾಯಿತೆ, ಇಲ್ಲದಿದ್ದರೆ ಕಾರಣವೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) ಒಟ್ಟು 179 ಹಳ್ಳಿಗಳನ್ನು, 9 ಮಂಡಲಗಳನ್ನು ಅಭಾವ ಪ್ರದೇಶವೆಂದು ಗುರುತಿಸಲಾಗಿದೆ.

ಆ) ರೂ. 8.785 ಲಕ್ಷಗಳು.

ಇ) *ಬಿಡುಗಡೆಯಾದ ಹಣ (ಲಕ್ಷ ರೂ.ಗಳಲ್ಲಿ)*

ರೂ. 5.882 ಲಕ್ಷ - ಉದ್ಯೋಗ ಸೃಜನೆಗಾಗಿ.

ರೂ. 2.903 ಲಕ್ಷ - ಕುಡಿಯುವ ನೀರಿನ ಪೂರೈಕೆಗಾಗಿ.